**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 330ರಡಿ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ.**

:ವಿಷಯ:

**ಅನುದಾನಿತ ಶಾಲಾ ಕಾಲೇಜುಗಳಲ್ಲಿ ದಿನಾಂಕ:01.04.2006ರ ನಂತರ ನೇಮಕ ಹೊಂದಿ, ವೇತನ ಪಡೆಯುತ್ತಿರುವ ಹಾಗೂ ಮೊದಲೇ ನೇಮಕಗೊಂಡು ನಂತರ ವೇತನಕ್ಕೊಳಪಟ್ಟು ವೇತನ ಪಡೆಯುತ್ತಿರುವ ನೌಕರರಿಗೆ ಯಾವುದೇ ನಿಶ್ಚಿತ ಪಿಂಚಣಿ ಸೌಲಭ್ಯ ಇಲ್ಲದೆ ಇದ್ದು, ಸರ್ಕಾರದ ಆದೇಶದಂತೆ ಆಡಳಿತ ಮಂಡಳಿಯವರು ತಮ್ಮ ಪಾಲನ್ನು ಪಾವತಿಸದೆ ಇರುವುದರಿಂದ ಸದರಿ ನೌಕರರು ಸಂಪೂರ್ಣವಾಗಿ ಪಿಂಚಣಿ ಸೌಲಭ್ಯದಿಂದ ವಂಚಿತರಾಗಿರುತ್ತಾರೆ. ಸರ್ಕಾರಿ ಶಾಲಾ ಕಾಲೇಜಿನ ನೌಕರರಿಗೆ ನೀಡುತ್ತಿರುವ ಜ್ಯೋತಿ ಸಂಜೀವಿನಿ ಮತ್ತಿತರ ವೈದ್ಯಕೀಯ ಸೌಲಭ್ಯಗಳನ್ನು ಅನುದಾನಿತ ನೌಕರರಿಗೆ ವಿಸ್ತರಿಸದೆ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಪ್ರಸ್ತಾಪಿಸಿರುತ್ತಾರೆ.**

:ಉತ್ತರ:

ದಿನಾಂಕ:01.04.2006ರ ನಂತರ ನೇಮಕ ಹೊಂದಿದ ಸಿಬ್ಬಂದಿಗಳು ಕಡ್ಡಾಯವಾಗಿ ಸರ್ಕಾರದ ಆದೇಶ ಸಂಖ್ಯೆ: FD (SPL) 04 PET 2005, ದಿನಾಂಕ:31.03.2006ರನ್ವಯ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಗೆ (ಎನ್.ಪಿ.ಎಸ್) ಒಳಪಡುತ್ತಾರೆ. ಸರ್ಕಾರದ ಸಂಖ್ಯೆ: ಆಇ 34 ಪಿಇಎಸ್ 2018, ದಿನಾಂಕ:23.06.2018 ರಲ್ಲಿ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯಡಿ ಬರುವ ಸರ್ಕಾರಿ ನೌಕರರಿಗೆ ನಿವೃತ್ತಿ ಉಪದಾನ, ಮರಣ ಉಪದಾನ ಮತ್ತು ಕುಟುಂಬ ಪಿಂಚಣಿಯನ್ನು ವಿಸ್ತರಿಸಲಾಗಿದೆ.

ದಿನಾಂಕ:01.04.2006ರ ಪಿಂಚಣಿ ನೀತಿಯಲ್ಲಿ, ಸರ್ಕಾರಿ, ಅನುದಾನಿತ ಶಾಲೆಗಳ ನೌಕರರಿಗೆ ಪಿಂಚಣಿ ಒದಗಿಸುವ ಕುರಿತು ಸರ್ಕಾರದ ಆದೇಶ ಸಂಖ್ಯೆ: FD (SPL) 04 PET 2005, ದಿನಾಂಕ:31.03.2006ರ ಕ್ರಮ ಸಂಖ್ಯೆ:08ರಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

...(8) ಸಹಾಯಾನುದಾನ ಶಿಕ್ಷಣ ಸಂಸ್ಥೆಗಳ ನೌಕರರಿಗೆ, ಗೊತ್ತು ಮಾಡಿದ ಪ್ರಯೋಜನ ಪಿಂಚಣಿಯನ್ನು ದಿನಾಂಕ:01.04.2006ರಂದು ಅಥವಾ ಅದರ ತರುವಾಯ ಸೇರುವ ಹೊಸದಾಗಿ ನೇಮಕಗೊಂಡ ಸಿಬ್ಬಂದಿಗೆ ನಿಲ್ಲಿಸಿ ಬಿಡತಕ್ಕದು. ನೂತನ ನಿಗಧಿತ ವಂತಿಗೆ ಪಿಂಚಣಿ ಯೋಜನೆಯು, ಆಯ್ಕೆಯ ಅವಕಾಶದ ಆಧಾರದ ಮೇಲೆ ನೌಕರನಿಗೆ ಮತ್ತು ನಿಯೋಜಕನಿಗೆ ಅನ್ವಯವಾಗತಕ್ಕದ್ದು

-2-

ಮತ್ತು ಆಯ್ಕೆಯ ಅವಕಾಶವನ್ನು ಇಬ್ಬರಿಂದಲೂ ಚಲಾಯಿಸತಕ್ಕದ್ದು, ಆದರೆ, ನಿಯೋಜಕರ ವಂತಿಗೆಯನ್ನು ಸಂಬಂಧಪಟ್ಟ ಸಂಸ್ಥೆಗಳು ಭರಿಸತಕ್ಕದ್ದು, ಆದರೆ ರಾಜ್ಯ ಸರ್ಕಾರವಲ್ಲ. ಈ ಆದೇಶವು ದಿನಾಂಕ:01.04.2006ರಿಂದ ಜಾರಿಗೆ ಬಂದಿರುತ್ತದೆ.

- ದಿನಾಂಕ:01.04.2006ರ ನಂತರ ಅನುದಾನಸಹಿತ ಅನುಮೋದನೆಗೊಂಡ ಅನುದಾನಿತ ಖಾಸಗಿ ಶಾಲೆ/ ಕಾಲೇಜುಗಳಲ್ಲಿನ ಸಿಬ್ಬಂದಿಗಳಿಗೆ ಮೇಲಿನ ನಿಯಮ ಅನ್ವಯವಾಗುತ್ತದೆ.

- ಅನುದಾನಿತ ಸಿಬ್ಬಂದಿಗಳ ಸೇವಾ ಸೌಲಭ್ಯಗಳು ಅನುದಾನಸಹಿತವಾಗಿ ಅನುಮೋದನೆಗೊಂಡ ದಿನಾಂಕದಿಂದ ಅನ್ವಯವಾಗುತ್ತದೆ. ಆದುದರಿಂದ 2006ರ ಪೂರ್ವದಲ್ಲಿ ಅನುದಾನರಹಿತವಾಗಿ ನೇಮಕಗೊಂಡ ಸಿಬ್ಬಂದಿಗಳು ದಿನಾಂಕ:01.04.2006ರ ನಂತರ ಅನುದಾನಕ್ಕೆ ಒಳಪಟ್ಟಲ್ಲಿ ಅಂತಹ ಸಿಬ್ಬಂದಿಗಳು ಹೊಸ ಪಿಂಚಣಿ ಯೋಜನೆ (ಎನ್.ಪಿ.ಎಸ್) ಯೋಜನೆಗೆ ಒಳಪಡುತ್ತಾರೆ.
- ಮೇಲೆ ತಿಳಿಸಿರುವ ಅಂಶಗಳಿಗೆ ಒಳಪಟ್ಟು, ಅನುದಾನಿತ ಸಿಬ್ಬಂದಿಗಳು ಇಚ್ಛೆ ಪಟ್ಟಲ್ಲಿ ಎನ್.ಪಿ.ಎಸ್ ಯೋಜನೆಗೆ ಒಳಪಡಿಸಬಹುದಾಗಿದೆ.
- ಈ ಪಿಂಚಣಿ ಯೋಜನೆಯು ಸಂಪೂರ್ಣವಾಗಿ ಸ್ವ-ಇಚ್ಛಾ (optional) ನೆಲೆಯಲ್ಲಿ ಜಾರಿಗೊಳಿಸುವುದರಿಂದ ಕಡ್ಡಾಯಗೊಳಿಸಲು ಅವಕಾಶವಿರುವುದಿಲ್ಲ.

ಮುಂದುವರೆದು, ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು-1963ರ ವ್ಯಾಪ್ತಿಗೆ ಒಳಪಡುವುದಿಲ್ಲ ಹಾಗೂ ಕರ್ನಾಟಕ ಶಿಕ್ಷಣ ಸಂಸ್ಥೆಗಳು( ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತು ಹಾಗೂ ನಿಬಂಧನೆಗಳು) ನಿಯಮಗಳು 1999ರ ಅನುಬಂಧ-ii (3) ರನ್ವಯ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯಕ್ಕೂ ಅರ್ಹರಾಗಿರುವುದಿಲ್ಲ. ಆದುದರಿಂದ ಅನುದಾನಿತ ಸಿಬ್ಬಂದಿಗಳು ಜ್ಯೋತಿ ಸಂಜೀವಿನಿ ಯೋಜನೆಯ ವ್ಯಾಪ್ತಿಗೆ ಬರುವುದಿಲ್ಲ.

ಸಂ: ಇಪಿ 251 ಎಸ್‌ಇಎಸ್ 2023

(ಎಸ್. ಮಧುಬಂಗಾರಪ್ಪ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು